# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ


**ಕೇಂದ್ರ ಕಛೇರಿ ಹಾಗೂ ಶಾಖೆ :**

"ಲಕ್ಷ್ಮೀ ಸದನ" ನಂ.3, 4, ಈಸ್ಟ್ ಆಂಜನೇಯ ದೇವಸ್ಥಾನದ ರಸ್ತೆ
ಬಸವನಗುಡಿ, ಬೆಂಗಳೂರು – 560 004. ದೂರವಾಣಿ : 080 2661 4794

e-mail : slmcb95@gmail.com website : srilakshmimahilabank.com


**RBI Licence No. : UBD KAN 1148P**

## 31ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

## 31th Annual General Body Meeting Notice

## ದಿನಾಂಕ: 22.06.2025ನೇ ಭಾನುವಾರ

## ಬೆಳಿಗ್ಗೆ 10-00 ಘಂಟೆಗೆ

**ಸ್ಥಳ: ಶ್ರೀ ಭವಾನಿ ಕಲ್ಯಾಣ ಮಂದಿರ ಟ್ರಸ್ಟ್**
**ಈಸ್ಟ್ ಅಂಜನೇಯ ದೇವಸ್ಥಾನ ಸ್ಟ್ರೀಟ್,**
**ಬಸವನಗುಡಿ, ಬೆಂಗಳೂರು–560 004**

**ಸದಸ್ಯರು ಬ್ಯಾಂಕಿನಲ್ಲಿ ಅರ್ಹ ಸದಸ್ಯರಾಗಿ ಮುಂದುವರೆಯಲು**

ಬ್ಯಾಂಕಿನ 5 ಮಹಾಸಭೆಗಳಲ್ಲಿನ 3 ಮಹಾಸಭೆಗಳಲ್ಲಿ ಭಾಗವಹಿಸ ಬೇಕಾಗಿರುವುದು ಕಡ್ಡಾಯವಾಗಿದೆ. ದಯವಿಟ್ಟು ತಪ್ಪದೆ ಮಹಾಸಭೆಯಲ್ಲಿ ಭಾಗವಹಿಸಲು ಮನವಿ.

ಬ್ಯಾಂಕಿನಲ್ಲಿ ವ್ಯವಹರಿಸುವುದು, ಸೇವೆಗಳನ್ನು ಪಡೆಯುವುದು ಸಹ ಕಡ್ಡಾಯ. ದಯವಿಟ್ಟು ಬ್ಯಾಂಕಿನಲ್ಲಿ ವ್ಯವಹರಿಸಿ.

## ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

# ನಿರ್ದೇಶಕ ಮಂಡಳಿ

| | |
|---|---|
| ಡಾ|| ವಾಸವಿ ರಂಗಧಾಮ್, B.Sc., M.A., R.B.P., P.h.D. | ಅಧ್ಯಕ್ಷರು |
| ಶ್ರೀಮತಿ ಎ. ನಿರ್ಮಲಾ | ಉಪಾಧ್ಯಕ್ಷರು |
| ಶ್ರೀಮತಿ ಅಂಜಲಿ. ಆರ್., B.E., M.B.A., | ನಿರ್ದೇಶಕರು |
| ಶ್ರೀಮತಿ ಪವಿತ್ರಾ ಶ್ರೀನಾಥ್., B.A., LL.b., | ವೃತ್ತಿಪರ ನಿರ್ದೇಶಕರು |
| ಶ್ರೀಮತಿ ವಿಜಯಲಕ್ಷ್ಮೀ. ಜಿ | ನಿರ್ದೇಶಕರು |
| ಶ್ರೀಮತಿ ಲಕ್ಷ್ಮೀ ಕೆ.ಹೆಚ್ | ನಿರ್ದೇಶಕರು |
| ಡಾ. ಸುಬ್ಬಲಕ್ಷ್ಮೀ ಬಿ. ಎಸ್., M.A., P.h.D. | ನಿರ್ದೇಶಕರು |
| ಶ್ರೀಮತಿ ವಿಜಯಾ ಜಿ. ಅಗಡಿ | ನಿರ್ದೇಶಕರು |
| ಶ್ರೀಮತಿ ವಿದ್ಯಾ ವಿನಯ್ ಸರ್ವೋತ್ತಮ್ | ನಿರ್ದೇಶಕರು |
| ಶ್ರೀಮತಿ ಸಂಧ್ಯಾ ಹೆಚ್. | ನಿರ್ದೇಶಕರು |
| ಶ್ರೀ ಆರ್. ಎಸ್.ಮಂಜುನಾಥ್ B.B.M., F.C.A. | ವೃತ್ತಿಪರ ನಿರ್ದೇಶಕರು |

ಮುಖ್ಯ ಕಾರ್ಯನಿರ್ವಹಣಾಧಿಕಾರಿ

**ಶ್ರೀ ಗೋವಿಂದಯ್ಯ.ಟಿ**

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ೩೧ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2024–25ನೇ ಸಾಲಿನ ಸರ್ವಸದಸ್ಯರ 31ನೇ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ **ಡಾ॥ ವಾಸವಿ ರಂಗಧಾಮ್‌ರವರ** ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಈ ಕೆಳಗೆ ಸೂಚಿಸಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವು ಈ ಮಹಾಸಭೆಗೆ ದಯವಾಡಿ ಆಗಮಿಸಿ ಮಹಾಸಭೆಯಲ್ಲಿ ಮಂಡಿಸುವ ಎಲ್ಲಾ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ಸವಿನಯ ಪ್ರಾರ್ಥನೆ.

**ಸ್ಥಳ:**

**ಸ್ಥಳ: ಶ್ರೀ ಭವಾನಿ ಕಲ್ಯಾಣ ಮಂದಿರ ಟ್ರಸ್ಟ್**
**ಈಸ್ಟ್ ಅಂಜನೇಯ ದೇವಸ್ಥಾನ ಸ್ಟ್ರೀಟ್,**
**ಬಸವನಗುಡಿ, ಬೆಂಗಳೂರು–560 004**

**ದಿನಾಂಕ : 22.06.2025, ಭಾನುವಾರ**
**ಬೆಳಿಗ್ಗೆ : 10–00 ಘಂಟೆಗೆ**

ಸ್ಥಳ : ಬೆಂಗಳೂರು
ದಿನಾಂಕ : 25.04.2025

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
**ಗೋವಿಂದಯ್ಯ. ಟಿ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

**ವಿ.ಸೂ : ಸನ್ಮಾನ್ಯ ಸದಸ್ಯರು ಮಹಾಸಭೆಗೆ ಬರುವಾಗ ಈ ಆಹ್ವಾನ ಪತ್ರಿಕೆಯ ಜೊತೆಗೆ ತಮ್ಮ ಗುರುತಿನ ಚೀಟಿಯನ್ನು ತಪ್ಪದೆ ತರಬೇಕಾಗಿ ವಿನಂತಿ.**

## ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

### ದಿನಾಂಕ: 22.06.2025 ರಂದು ಭಾನುವಾರ ಬೆಳಿಗ್ಗೆ 10–00 ಗಂಟೆಗೆ ನಡೆಯಲಿರುವ 31ನೇ ವಾರ್ಷಿಕ ಮಹಾಸಭೆಯ ಕಾರ್ಯಕಲಾಪಗಳು

01. ಪ್ರಾರ್ಥನೆ
02. ಸ್ವಾಗತ ಭಾಷಣ
03. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು.
04. ಮಹಾಸಭೆಯ ಆಹ್ವಾನ ಪತ್ರಿಕೆಯಲ್ಲಿನ ಕಾರ್ಯಕಲಾಪಗಳ ಪಟ್ಟಿಯನ್ನು ಓದಿ ಅಂಗೀಕರಿಸುವುದು.
05. 2023–2024ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು.
06. 2024–2025ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಅಂಗೀಕರಿಸುವುದು ಮತ್ತು ಮುಂದಿನ ವರ್ಷದ ಕಾರ್ಯಯೋಜನೆಗೆ ಅನುಮೋದನೆ ನೀಡುವುದು.
07. 2024–2025ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ಆಡಳಿತ ಮಂಡಲಿಯ ಅನುಪಾಲನಾ ವರದಿಯೊಂದಿಗೆ ಪರಿಶೀಲಿಸಿ ಅಂಗೀಕರಿಸುವುದು.
08. 2025–2026ನೇ ಸಾಲಿನ ಲೆಕ್ಕಪರಿಶೋಧಕರನ್ನು ನೇಮಿಸುವುದು.
09. 2024–2025ನೇ ಸಾಲಿನ ವ್ಯಯದ ಪಟ್ಟಿಯನ್ನು ಪರಿಶೀಲಿಸುವುದು ಹಾಗೂ ವ್ಯಯದ ಪಟ್ಟಿಯಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳಿಗೆ ಅನುಮೋದನೆ ನೀಡುವುದು ಮತ್ತು 2025–2026ನೇ ಸಾಲಿನ ಮುಂಗಡ ಪತ್ರ ಹಾಗೂ 2026–2027ನೇ ಸಾಲಿಗೆ ತಾತ್ಕಾಲಿಕ ಮುಂಗಡ ಪತ್ರವನ್ನು ಮಂಜೂರು ಮಾಡುವುದು.
10. 2024–2025ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮಾಡುವುದು.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ಪರಿಶೀಲಿಸುವುದು.
12. ಮಂಡಲಿ ಮತ್ತು ಪದಾಧಿಕಾರಿಗಳಿಗೆ 2024–2025ನೇ ಸಾಲಿನಲ್ಲಿ ನೀಡಿರುವ ಸಂಭಾವನೆ, ಪ್ರಯಾಣ ಹಾಗೂ ದಿನಭತ್ಯೆಯ ಮೇಲಿನ ವರದಿಯನ್ನು ಒಪ್ಪುವ ಬಗ್ಗೆ.

13. ಬ್ಯಾಂಕಿನ ಸಿಬ್ಬಂದಿಗಳ ವೃಂದಬಲ, ನೇಮಕಾತಿ, ವೇತನ ಇತರೇ ಆರ್ಥಿಕ ಸೌಲಭ್ಯಗಳ ಪರಿಶೀಲನೆ ಹಾಗೂ ಆಗತ್ಯ ಕ್ರಮಗಳ ಬಗ್ಗೆ ಚರ್ಚಿಸಿ ತೀರ್ಮಾನಿಸುವುದು.

14. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ.

15. ಮಂಡಲಿಯ ಸದಸ್ಯರ ಮತ್ತು ಕಾರ್ಯನಿರ್ವಾಹಕರ ಸಂಬಂಧಿಗಳು ಸಿಬ್ಬಂದಿಗಳಾಗಿ ನೇಮಕವಾಗಿದ್ದರೆ ಅಂಥ ಸಿಬ್ಬಂದಿಗಳ ಪಟ್ಟಿಯ ಪರಿಶೀಲನೆ.

16. ವಿಚಾರಣಾ ಮತ್ತು ಪರಿವೀಕ್ಷಣಾ ವರದಿಯ ಪರಿಶೀಲನೆ ಮಂಡಳಿಯ ಅನುಪಾಲನಾ ವರದಿಯ ಪರಿಶೀಲನೆ.

17. ಮುನ್ಸೂಚನೆಯ ಮೇರೆಗೆ ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಬಹುದಾದ ವಿಷಯಗಳು.

18. ವಂದನಾರ್ಪಣೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

**ಸ್ಥಳ : ಬೆಂಗಳೂರು**
**ದಿನಾಂಕ : 25.04.2025**

**ಗೋವಿಂದಯ್ಯ. ಟಿ**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**2024–2025ನೇ ಸಾಲಿನ ವಾರ್ಷಿಕ ವರದಿ ಪುಸ್ತಕ :**
**ಮಾನ್ಯ ಸದಸ್ಯರು ಮಹಾಸಭೆಗೆ ಒಂದು ವಾರದ ಮುಂಚೆ ಬ್ಯಾಂಕಿಗೆ ಭೇಟಿ ನೀಡಿ 2024–2025ನೇ ಸಾಲಿನ ವಾರ್ಷಿಕ ವರದಿಯನ್ನು ಪಡೆಯಲು ಕೋರಲಾಗಿದೆ.**

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಸನ್ಮಾನ್ಯ ಸದಸ್ಯರುಗಳಲ್ಲಿ ವಿನಂತಿ

### 1. ಸದಸ್ಯರ ವಿಳಾಸದಲ್ಲಿನ ಬದಲಾವಣೆ :

ಪ್ರತಿ ವರ್ಷ ಸದಸ್ಯರುಗಳಿಗೆ ಟಪಾಲಿನಲ್ಲಿ ಕಳುಹಿಸುತ್ತಿರುವ ಮಹಾಸಭೆಯ ಅನೇಕ ಆಹ್ವಾನ ಪತ್ರಿಕೆಗಳು ವಿಳಾಸ ಬದಲಾವಣೆಯ ಕಾರಣದಿಂದ ಬ್ಯಾಂಕಿಗೆ ಹಿಂತಿರುಗಿ ಬರುತ್ತಿರುತ್ತವೆ. ಇದರಿಂದ ಬ್ಯಾಂಕಿನ ಇತ್ತೀಚಿನ ವ್ಯವಹಾರಗಳನ್ನು ಸದಸ್ಯರು ತಿಳಿಯಲು ಸಾಧ್ಯವಿರುವುದಿಲ್ಲ. ಹಾಗೆಯೇ ಅವರು ಹೂಡಿದ ಷೇರು ಬಂಡವಾಳದ ಮೇಲಿನ ಡಿವಿಡೆಂಡು ಪಡೆಯದೆ, ರದ್ದಾಗಿ ಅದು ಅಪದ್ಧನ ನಿಧಿಗೆ (ರಿಸರ್ವ್ ಫಂಡಿಗೆ) ವರ್ಗಾವಣೆಯಾಗುತ್ತಿರುತ್ತದೆ. ಆದ್ದರಿಂದ ಸನ್ಮಾನ್ಯ ಸದಸ್ಯರುಗಳು ತಮ್ಮ ವಿಳಾಸದಲ್ಲಿ ಬದಲಾವಣೆಯಾಗಿದ್ದರೆ, ತಕ್ಷಣ ಬದಲಾವಣೆಯಾದ ವಿಳಾಸವನ್ನು ಬ್ಯಾಂಕಿಗೆ ನೀಡುವುದು.

### 2. ಸದಸ್ಯರ ಗುರುತಿನ ಚೀಟಿ :

1. ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಲು, ಚುನಾವಣೆಯಲ್ಲಿ ಮತ ಚಲಾಯಿಸಲು ಬ್ಯಾಂಕಿನಿಂದ ನೀಡಲಾಗುವ ಇತ್ತೀಚಿನ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ತೋರಿಸುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ರ ಅನ್ವಯ ಕಡ್ಡಾಯವಾಗಿರುತ್ತದೆ.
2. ಇದುವರೆವಿಗು ಗುರುತಿನ ಚೀಟಿಯನ್ನು ಪಡೆಯದೆ ಇರುವ ಮಾನ್ಯ ಸದಸ್ಯರುಗಳು ಈ ಕೆಳಕಂಡ ದಾಖಲೆಗಳನ್ನು ಸದಸ್ಯರೇ ಖುದ್ದಾಗಿ ಬ್ಯಾಂಕಿನ ಷೇರು ವಿಭಾಗದಲ್ಲಿ ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಕೋರಲಾಗಿದೆ.
   - ಅ. ಇತ್ತೀಚಿನ 2 ಸ್ಟಾಂಪ್ ಅಳತೆಯ ಭಾವಚಿತ್ರಗಳು.
   - ಆ. ತಮ್ಮ ವಿಳಾಸ ಬದಲಾವಣೆ ಆಗಿದ್ದಲ್ಲಿ, ಹೊಸ ವಿಳಾಸ ದೃಢೀಕರಣ ಪತ್ರ ನೀಡತಕ್ಕದ್ದು ಇದು ಕಡ್ಡಾಯವಾಗಿ ಪಾಲಿಸಬೇಕಾದ ಕೆ.ವೈ.ಸಿ. ನಿಯಮವೂ ಸಹ ಆಗಿರುತ್ತದೆ.

**3. ಸದಸ್ಯರು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :**

ಮಹಾಸಭೆಯಲ್ಲಿ ಬ್ಯಾಂಕಿನ ಆಡಳಿತ ವಿಷಯದಲ್ಲಿ ಯಾವುದಾದರೂ ಚರ್ಚಿಸತಕ್ಕ ವಿಷಯವಿದ್ದರೆ 5 ದಿನಗಳ ಮುಂಚಿತವಾಗಿ ಚರ್ಚೆಯ ವಿಷಯವನ್ನು ಬ್ಯಾಂಕಿನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಲುಪಿಸತಕ್ಕದ್ದು.

**4. ಮಹಾಸಭೆಯಲ್ಲಿ ಸದಸ್ಯರ ಹಾಜರಾತಿ :**

ಬ್ಯಾಂಕಿನ 5 (ಐದು) ಮಹಾಸಭೆಗಳಲ್ಲಿನ 3 (ಮೂರು) ಮಹಾಸಭೆಗಳಲ್ಲಿ ಭಾಗವಹಿಸಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ದಯವಿಟ್ಟು ತಪ್ಪದೆ ಮಹಾಸಭೆಯಲ್ಲಿ ಭಾಗವಹಿಸಲು ಮನವಿ. ಬ್ಯಾಂಕಿನ ಸನ್ಮಾನ್ಯ ಸದಸ್ಯರು ಮಹಾಸಭೆಗೆ ಸರಿಯಾದ ವೇಳೆಗೆ ಆಗಮಿಸಿ, ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಬೇಕಾಗಿ ವಿನಂತಿ.

**5. ಡಿವಿಡೆಂಡು ಪಡೆಯಲು ನೋಟೀಸು :**

ಸನ್ಮಾನ್ಯ ಸದಸ್ಯರು 2022–2023ನೇ ಸಾಲಿನ ಡಿವಿಡೆಂಡ್‌ನ್ನು ದಿನಾಂಕ: 30.09.2025 ರೊಳಗೆ ಪಡೆಯಲು ಸೂಚಿಸಲಾಗಿದೆ. ತದ ನಂತರ ಸದಸ್ಯರು ಈ ಡಿವಿಡೆಂಡನ್ನು ಪಡೆಯಲು ಅರ್ಹರಾಗುವುದಿಲ್ಲ. ಈ ನಿಗದಿತ ದಿನಾಂಕದೊಳಗೆ ಪಡೆಯದೆ ಇರುವ ಸದಸ್ಯರ ಡಿವಿಡೆಂಡನ್ನು ಬ್ಯಾಂಕಿನ ಹಾಲಿ ಬೈಲಾ ಸಂಖ್ಯೆ 110ರ ಪ್ರಕಾರ ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು. ಡಿವಿಡೆಂಡನ್ನು ಸದಸ್ಯರುಗಳು ಬ್ಯಾಂಕಿನ ಕೆಲಸದ ದಿನಗಳಲ್ಲಿ ಬ್ಯಾಂಕಿಗೆ ಬಂದು ಪಡೆಯಬೇಕಾಗಿ ವಿನಂತಿ. ಇದನ್ನು ಅಂತಿಮ ತಿಳುವಳಿಕೆಯೆಂದು ತಿಳಿಯುವುದು.

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಷೇರು ಹಣದ ಮೇಲಿನ ಡಿವಿಡೆಂಡು ಪಡೆಯುವ ವಿಧಾನಗಳು

1. ಸದಸ್ಯರು ಬ್ಯಾಂಕಿನ ಹೊಂದಿರುವ ತಮ್ಮ ಉಳಿತಾಯ/ಚಾಲ್ತಿ ಖಾತೆಗಳಿಗೆ, ಷೇರು ಹಣದ ಮೇಲಿನ ಡಿವಿಡೆಂಡನ್ನು ಜಮಾ ಮಾಡಲಾಗುತ್ತದೆ.

2. ಸದಸ್ಯರು ಉಳಿತಾಯ/ಚಾಲ್ತಿ ಖಾತೆ ಹೊಂದಿದ್ದು, ಷೇರು ವಿಭಾಗಕ್ಕೆ ಖಾತೆಯ ಸಂಖ್ಯೆಯನ್ನು ನೀಡದಿದ್ದ ಪಕ್ಷದಲ್ಲಿ ನೀಡಬೇಕಾಗಿ ವಿನಂತಿ.

3. ಉಳಿತಾಯ/ಚಾಲ್ತಿ ಖಾತೆಯನ್ನು ಹೊಂದಿರದ ಮಾನ್ಯ ಸದಸ್ಯರು ಖಾತೆಯನ್ನು ತೆರೆದು ಖಾತೆಯ ಸಂಖ್ಯೆಯನ್ನು ಷೇರು ವಿಭಾಗಕ್ಕೆ ತಿಳಿಸುವುದು.

4. ಸದಸ್ಯರು ಈ ರೀತಿಯಾಗಿ ಉಳಿತಾಯ/ಚಾಲ್ತಿ ಖಾತೆಯನ್ನು ಹೊಂದುವುದರ ಮೂಲಕ ತಮ್ಮ ಡಿವಿಡೆಂಡನ್ನು ಸಕಾಲದಲ್ಲಿ ಪಡೆಯಲು ಅನುಕೂಲ ವಾಗುವುದು.

5. ಸದಸ್ಯರುಗಳು ಬ್ಯಾಂಕಿನಲ್ಲಿ ಸಾಲ ಪಡೆದು ಆ ಸಾಲ ಸುಸ್ತಿ ಅದ ಪಕ್ಷದಲ್ಲಿ ಅವರ ಡಿವಿಡೆಂಡನ್ನು ಮತ್ತು ಆ ಸಾಲಕ್ಕೆ ಜಾಮೀನುದಾರರಾದ ಸದಸ್ಯರ ಡಿವಿಡೆಂಡನ್ನು ಸುಸ್ತಿ ಸಾಲದ ಖಾತೆಗೆ ವರ್ಗಾಯಿಸಲಾಗುವುದು.

6. ಬ್ಯಾಂಕಿನಲ್ಲಿ ಯಾವುದೇ ಖಾತೆಯನ್ನು ಹೊಂದಿಲ್ಲದಿದ್ದರೆ ಸದಸ್ಯರು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಡಿವಿಡೆಂಡನ್ನು ಹಣದ ರೂಪದಲ್ಲಿಯೂ ಸಹ ಪಡೆಯಬಹುದು.

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಸದಸ್ಯರು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ರ ಬೈಲಾ ಸಂಖ್ಯೆ.20 ರಂತೆ, ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಟ ಸೇವೆಗಳು ಅಥವಾ ಸೌಲಭ್ಯಗಳ ಪ್ರಮಾಣವು ಈ ಕೆಳಗಿನಂತಿರುತ್ತವೆ.

1. ಒಂದು ವರ್ಷದ ಅವಧಿಯಲ್ಲಿ ಕನಿಷ್ಟ ರೂ.2,500=00 ಗಳನ್ನು ಬ್ಯಾಂಕಿನ ಯಾವುದಾದರೂ ಠೇವಣಿ ಯೋಜನೆಯಲ್ಲಿ ತೊಡಗಿಸಿರಬೇಕು ಇಲ್ಲವೇ ಮಾಸಿಕ ಕನಿಷ್ಟ ರೂ.100=00ಗಳ ರಿಕರಿಂಗ್ ಠೇವಣಿಯನ್ನು ಹೊಂದಿದ್ದು, ಸುಸ್ತಿ ಇಲ್ಲದಂತೆ ನಿಗದಿತ ಕಂತುಗಳನ್ನು ಪಾವತಿಸುತ್ತಿರಬೇಕು.

   **ಅಥವಾ**

   ಹಿಂದಿನ ಒಂದು ವರ್ಷದ ಅವಧಿಯಲ್ಲಿ ಸಾಲವನ್ನು ಪಡೆಯಲು ಅರ್ಹತೆ ಹೊಂದಿದ್ದು, ಸಾಲವನ್ನು ಪಡೆಯಲು ನಿಗದಿಪಡಿಸಿರುವ ನಿಯಮ, ನಿಬಂಧನೆಗಳಿಗೆ ಒಳಪಟ್ಟು ಕನಿಷ್ಟ ಮೊತ್ತವನ್ನು ಆದರೂ ಸಾಲವನ್ನು ಪಡೆದು, ಸುಸ್ತಿ ಇಲ್ಲದೆ ಕಂತುಗಳನ್ನು ಪಾವತಿಸಿರಬೇಕು.

   **ಅಥವಾ**

   ಬ್ಯಾಂಕಿನಲ್ಲಿ ಉಳಿತಾಯ ಖಾತೆ, ಚಾಲ್ತಿ ಖಾತೆಯನ್ನು ಹೊಂದಿದ್ದು, ಹಿಂದಿನ ಒಂದು ವರ್ಷದ ಅವಧಿಯಲ್ಲಿ ಕನಿಷ್ಟ 10 ವ್ಯವಹಾರಗಳನ್ನಾದರೂ ನಡೆಸಿರಬೇಕು

2. ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.

3. ಸಾಲದ ಮೊತ್ತವು ಬ್ಯಾಂಕು ಮಂಜೂರು ಮಾಡಿ ಸದಸ್ಯರು ಉಪಯೋಗಿಸಿ ಕೊಂಡ ಸಾಲದ ಮಿತಿಯಾಗಿರತಕ್ಕದ್ದು, ಇದು ಇಡೀ ಸಾಲದ ಅವಧಿಗೆ ಅನ್ವಯವಾಗತಕ್ಕದ್ದು.

4. ರಿಸರ್ವ್ ಬ್ಯಾಂಕು ನೀಡಿರುವ **"ನಿಮ್ಮ ಗ್ರಾಹಕನನ್ನು ತಿಳಿಯಿರಿ ಕೆ.ವೈ.ಸಿ"** ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯನಿಗೆ ಅನ್ವಯವಾಗತಕ್ಕದ್ದು.

ಸನ್ಮಾನ್ಯ ಎಲ್ಲಾ ಸದಸ್ಯರು ಬ್ಯಾಂಕಿನ ವ್ಯವಹಾರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಬ್ಯಾಂಕಿನಿಂದ ನೀಡುವ ಸೇವೆಗಳನ್ನು ಪಡೆದು, ತನ್ಮೂಲಕ ಬ್ಯಾಂಕಿನ ಅಭಿವೃದ್ದಿಗೆ ಸಹಕರಿಸಬೇಕಾಗಿ ವಿನಂತಿ.

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಪ್ರತಿಭಾ ಪುರಸ್ಕಾರ/ವಿಶೇಷ ಸನ್ಮಾನಗಳು

ಸನ್ಮಾನ್ಯ ಸದಸ್ಯರಲ್ಲಿ ಮನವಿ,

2024–2025ನೇ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾದ ಬ್ಯಾಂಕಿನ ಸಕ್ರಿಯ ಸದಸ್ಯರು ಮತ್ತು ಸದಸ್ಯರುಗಳ ಮಕ್ಕಳಿಗಾಗಿ ಪ್ರತಿಭಾ ಪುರಸ್ಕಾರಗಳನ್ನು ಈ ಸಾಲಿನಲ್ಲಿ ನೀಡಲು ತೀರ್ಮಾನಿಸಲಾಗಿದ್ದು, **ಎಸ್.ಎಸ್.ಎಲ್.ಸಿ ಮತ್ತು 2ನೇ ಪಿ.ಯು.ಸಿ** ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅತಿ ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆದುದರಿಂದ, ಅರ್ಹ ಸನ್ಮಾನ್ಯ ಸದಸ್ಯರು, ಅವರ ಅಥವಾ ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ವಿವರಗಳೊಂದಿಗೆ ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು **"ಅಧ್ಯಕ್ಷರು", ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ, "ಲಕ್ಷ್ಮೀ ಸದನ", ನಂ. 3,4, ಈಸ್ಟ್ ಅಂಜನೇಯ ಟೆಂಪಲ್ ಸ್ಟ್ರೀಟ್, ಬಸವನಗುಡಿ, ಗಾಂಧೀ ಬಜಾರ್, ಬೆಂಗಳೂರು – 560004** ವಿಳಾಸ ನಮೂದಿಸಿ ಬ್ಯಾಂಕಿಗೆ **ದಿನಾಂಕ : 16.06.2025** ರೊಳಗೆ ಸಲ್ಲಿಸಬೇಕಾಗಿ ಕೋರಲಾಗಿದೆ.

### ವಿಶೇಷ ಸನ್ಮಾನಗಳು

**2024–2025ನೇ ಸಾಲಿನಲ್ಲಿ ಸಕ್ರಿಯ ಸದಸ್ಯರು ಪ್ರಾರಂಭದಲ್ಲಿ ಸದಸ್ಯರಾದ ಸದಸ್ಯರು ಮತ್ತು ಸಕ್ರಿಯ ಹಿರಿಯ ಸದಸ್ಯರಿಗೆ ವಿಶೇಷ ಸನ್ಮಾನ ನೀಡಲಾಗುವುದು.**

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಪ್ರತಿಭಾ ಪುರಸ್ಕಾರಗಳು

**ಪ್ರತಿಭಾ ಪುರಸ್ಕಾರಗಳಿಗೆ ಈ ಮುಂದೆ ತಿಳಿಸಿರುವ ವಿವರಗಳನ್ನೊಳಗೊಂಡ ಅರ್ಜಿಗಳನ್ನು ಕರೆಯಲಾಗಿದೆ.**

1. 2024–2025ನೇ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾದ ಮತ್ತು ಅತಿ ಹೆಚ್ಚು ಅಂಕಗಳನ್ನು ಪಡೆದ ಮೊದಲ 10 ವಿದ್ಯಾರ್ಥಿಗಳಿಗೆ 10 ಪುರಸ್ಕಾರಗಳನ್ನು ಮತ್ತು ಅರ್ಜಿಗಳ ಸಂಖ್ಯೆ, ವಿಶೇಷತೆ (ಮೆರಿಟ್) ಆಧಾರದ ಮೇಲೆ ಸಮಾಧಾನಕರ ಬಹುಮಾನಗಳನ್ನು ಆಡಳಿತ ಮಂಡಲಿ ಅಂತಿಮವಾಗಿ ತೀರ್ಮಾನಿಸುವ ಸಂಖ್ಯೆಯಲ್ಲಿ ನೀಡಲಾಗುವುದು.

2. ಪುರಸ್ಕಾರಗಳಿಗೆ ಅರ್ಜಿಗಳನ್ನು ಈ ಕೆಳಗೆ ನಿಗಧಿಪಡಿಸಿದ ಕನಿಷ್ಠ ಅಂಕಗಳು ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದವರಿಂದ ಆಹ್ವಾನಿಸಲಾಗಿದೆ.

### ತರಗತಿ/ಅರ್ಹತೆ

ಅ) 10ನೇ ತರಗತಿ (ಎಸ್.ಎಸ್.ಎಲ್.ಸಿ.) ಉತ್ತೀರ್ಣರಾಗಿರುವವರು ಶೇ.85 ಕ್ಕೂ ಹೆಚ್ಚಿನ ಅಂಕಗಳು.

ಆ) 2ನೇ ಪಿ.ಯು.ಸಿ / 12ನೇ ತರಗತಿ ಶೇ. 85 ಕ್ಕೂ ಹೆಚ್ಚಿನ ಅಂಕಗಳು.

### ಪುರಸ್ಕಾರಗಳಿಗೆ ನಿಗಧಿಪಡಿಸಿರುವ ಅರ್ಹತೆಗಳು/ನಿಬಂಧನೆಗಳು

ಅ. 2024–2025ನೇ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾದ ಬ್ಯಾಂಕಿನ ಸಕ್ರಿಯ ಸದಸ್ಯರು **(ಪುಟ ಸಂಖ್ಯೆ. 9 ರಲ್ಲಿರುವಂತೆ)**/ಸದಸ್ಯರ ಮಕ್ಕಳು ಮಾತ್ರ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

1. 2024–2025ನೇ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾದ ಬ್ಯಾಂಕಿನ ಸಕ್ರಿಯ ಸದಸ್ಯರು **(ಪುಟ ಸಂಖ್ಯೆ. 9 ರಲ್ಲಿರುವಂತೆ)**/ಸದಸ್ಯರ ಮಕ್ಕಳು ಮಾತ್ರ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

2. ಅರ್ಜಿಯ ಜೊತೆಗೆ 2024–2025ನೇ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾದ ತರಗತಿ/ಪದವಿಯ ಎಲ್ಲಾ ವರ್ಷಗಳ ಅಂಕಪಟ್ಟಿಯ ಫೋಟೋ ಪ್ರತಿಯನ್ನು ಲಗತ್ತಿಸಬೇಕು.

3. ಫೋಟೋ ಪ್ರತಿಯ ಅಂಕಪಟ್ಟಿಗಳನ್ನು ನಮ್ಮ ಬ್ಯಾಂಕಿನ ವ್ಯವಸ್ಥಾಪಕರಲ್ಲಿ ಮೂಲ ಅಂಕಪಟ್ಟಿಗಳನ್ನು ತೋರಿಸಿ ದೃಢೀಕರಿಸುವುದು ಅಥವಾ ವಿದ್ಯಾ ಸಂಸ್ಥೆಯ ಮುಖ್ಯೋಪಾಧ್ಯಾಯರು ಅಥವಾ ಪ್ರಾಂಶುಪಾಲರು/ ಗೆಜೆಟೆಡ್ ಆಫೀಸರ್‌ಗಳಿಂದ ದೃಢೀಕರಿಸಿರಬೇಕು.

4. ಅಂಕಪಟ್ಟಿಯಲ್ಲಿ ವಿದ್ಯಾರ್ಥಿ ಮತ್ತು ಶಾಲೆಯ/ಕಾಲೇಜು ಹೆಸರು, ವ್ಯಾಸಂಗ ಮಾಡಿದ ತರಗತಿ, ವರ್ಷ, ನಿಗಧಿಪಡಿಸಿದ ಅಂಕಗಳು, ಶೇಕಡಾವಾರು ಪಡೆದ ಅಂಕಗಳ ವಿವರಗಳು ಕಡ್ಡಾಯವಾಗಿ ಇರಬೇಕಾಗಿರುತ್ತದೆ.

5. 10ನೇ ತರಗತಿ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳು ತೇರ್ಗಡೆಯಾದ ವರ್ಷದ ಅಂಕ ಪಟ್ಟಿಯನ್ನು ಲಗತ್ತಿಸಬೇಕು.

6. ಪ್ರತಿ ವರ್ಷದ ಪರೀಕ್ಷೆಯಲ್ಲಿ ಒಂದಾವರ್ತಿಯಲ್ಲಿ ತೇರ್ಗಡೆಯಾದವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಪುರಸ್ಕಾರಗಳಿಗೆ ನಿಗಧಿಪಡಿಸಿರುವ ಅರ್ಹತೆಗಳು/ನಿಬಂಧನೆಗಳು

1. ಸದಸ್ಯರ ಹೆಸರು :

2. ಸದಸ್ಯತ್ವ ಸಂಖ್ಯೆ :

3. ಸದಸ್ಯತ್ವ ಸಕ್ರಿಯವೇ **(ಪುಟ ೯ರಲ್ಲಿರುವಂತೆ ಹೌದು/ಇಲ್ಲ)**

4. ಸಕ್ರಿಯ ಸದಸ್ಯತ್ವವಾದಲ್ಲಿ ಬ್ಯಾಂಕಿನಲ್ಲಿನ ವ್ಯವಹಾರಗಳ ವಿವರ

ಸಾಲದ ಖಾತೆ ಸಂ. ............................................ ತಾ: ............................

ಠೇವಣಿ ಖಾತೆ ಸಂ. ............................................ ತಾ: ............................

ಉಳಿತಾಯ ಖಾತೆ ಸಂ. ....................................... ತಾ: ............................

ಚಾಲ್ತಿ ಖಾತೆ ಸಂ. ............................................... ತಾ: ............................

5. ವಿಳಾಸ ಮತ್ತು ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆ:

6. ಪ್ರತಿಭಾ ಪುರಸ್ಕಾರಕ್ಕಾಗಿ ಸಲ್ಲಿಸಿದ ವಿದ್ಯಾರ್ಥಿಯ(ಮಗನ/ಮಗಳ)ಹೆಸರು :

7. 2024–2025ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ಶಾಲೆಯ/ಕಾಲೇಜಿನ ವಿಳಾಸ ಹಾಗೂ ತೇರ್ಗಡೆಯಾದ ತರಗತಿ/ಪದವಿ :

8. ತೇರ್ಗಡೆಯಾದ ತರಗತಿ/ಪದವಿಯಲ್ಲಿ :

(ಎ) ನಿಗಧಿಪಡಿಸಿದ ಒಟ್ಟು ಅಂಕಗಳು :

(ಬಿ) ವಿದ್ಯಾರ್ಥಿಯು ಪಡೆದ ಅಂಕಗಳು :

(ಸಿ) ಶೇಕಡಾವಾರು ಅಂಕಗಳು :

ಮೇಲೆ ಕಾಣಿಸಿದ ವಿವರಗಳು ಸತ್ಯವಾಗಿದ್ದು **"ಪ್ರತಿಭಾ ಪುರಸ್ಕಾರಕ್ಕಾಗಿ"** ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಯು/ನಾನು/ನನ್ನ ಮಗ/ಮಗಳು ಎಂದು ದೃಢೀಕರಿಸುತ್ತೇನೆ.

ದಿನಾಂಕ :

ಅರ್ಜಿದಾರ ಸದಸ್ಯರ ಸಹಿ

# ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ

## ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು

ಮಹಾಸಭೆಯಲ್ಲಿ ಬ್ಯಾಂಕಿನ ಆಡಳಿತ ವಿಷಯದಲ್ಲಿ ಯಾವು ದಾದರೂ ಚರ್ಚಿಸತಕ್ಕ ವಿಷಯವಿದ್ದರೆ 5 ದಿನಗಳ ಮುಂಚಿತವಾಗಿ ಚರ್ಚೆಯ ವಿಷಯವನ್ನು ಬ್ಯಾಂಕಿನ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ತಲುಪಿಸತಕ್ಕದ್ದು.

## ಠೇವಣಿ ಮೇಲಿನ ಬಡ್ಡಿ ಆದಾಯಕ್ಕೆ ಮೂಲದಲ್ಲಿ ತೆರಿಗೆ ಕಟಾಯಿಸುವುದು

ಆದಾಯ ತೆರಿಗೆ ಇಲಾಖೆಯ ಇತ್ತೀಚಿನ ಆದೇಶದ ಅನುಸಾರ ಸಹಕಾರ ಬ್ಯಾಂಕುಗಳು ತಮ್ಮ ಸದಸ್ಯರ ಠೇವಣಿಗಳ ಮೇಲಿನ ವಾರ್ಷಿಕ ರೂ. 50,000/= ಮೇಲ್ಪಟ್ಟ ಬಡ್ಡಿ ಆದಾಯಕ್ಕೆ ಮೂಲದಲ್ಲಿ ತೆರಿಗೆ ಕಟಾಯಿಸಬೇಕಾಗಿರುತ್ತದೆ (ಟಿ.ಡಿ.ಎಸ್).ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದ ಸನ್ಮಾನ್ಯ ಸದಸ್ಯರುಗಳು ಫಾರಂ 15ಜಿ/15ಹೆಚ್ ಠೇವಣಿ ಮೇಲಿನ ಬಡ್ಡಿ ಆದಾಯಕ್ಕೆ ಮೂಲದಲ್ಲಿ ತೆರಿಗೆ ಕಟಾಯಿಸುವುದು ವಿನಾಯಿತಿ ಪಡೆಯಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಬ್ಯಾಂಕಿನ ವ್ಯವಸ್ಥಾಪಕರನ್ನು ಸಂಪರ್ಕಿಸುವುದು.

Under Certificate of Posting

*Printed Matter*

Book Post

To

Ms.

Sri Lakshmi Mahila Sahakara Bank Niyamitha

Regd. Office & Branch

'Lakshmi Sadana', No. 3, 4, East Anjaneya Temple Street,
Basavanagudi, Bangalore - 560 004, Phone : 2661 4794